**ಅಮೆರಿಕದ ಫ್ಲೋರಿಡಾದಲ್ಲಿ ನಡೆದ 69ನೇ ಭುವನ ಸುಂದರಿ ಸ್ಪರ್ಧೆಯಲ್ಲಿ ಮೂರನೇ ರನ್ನರ್ ಅಪ್ ಸ್ಥಾನ ಪಡೆದ ಆ್ಯಡ್ಲಿನ್ ಕ್ಯಾಸ್ಟಲಿನೊ ಉಡುಪಿ ಮೂಲದವರು. ಆದರೆ ಹುಟ್ಟಿ–ಬೆಳೆದಿದ್ದೆಲ್ಲ ಕುವೈತ್‌ನಲ್ಲಿ. ಬಿಜಿನೆಸ್ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಪದವಿ ಪಡೆದಿರುವ 22ರ ಹರೆಯದ ಆ್ಯಡ್ಲಿನ್ ಕಂಡ ಕನಸೇ ಬೇರೆ, ಒಲಿದ ಕನಸೇ ಬೇರೆ. ತಾವು ನಡೆದುಬಂದ ದಾರಿ ಹಾಗೂ ಗೆಲುವಿನ ಹೆಜ್ಜೆಗಳನ್ನು 'ಸುಧಾ'ಕ್ಕೆ ನೀಡಿದ ಸಂದರ್ಶನದಲ್ಲಿ ಅವರು ಸ್ಮರಿಸಿಕೊಂಡಿದ್ದಾರೆ.**



◆ **2001ರಲ್ಲಿ ಸೆಲೀನಾ ಜೇಟ್ಲಿ 'ಮಿಸ್ ಯುನಿವರ್ಸ್' ಸ್ಪರ್ಧೆಯಲ್ಲಿ 4ನೇ ರನ್ನರ್ ಅಪ್ ಆದ ನಂತರ ಇಲ್ಲಿಯವರೆಗೆ ಭಾರತಕ್ಕೆ ಮತ್ತೆ ಆ ಹೆಮ್ಮೆ ಒದಗಿಬಂದಿರಲಿಲ್ಲ. ಈಗ ನೀವು ಭಾರತಕ್ಕೆ 3ನೇ ರನ್ನರ್ ಅಪ್ ಆಗಿದ್ದೀರಿ. ಹೇಗನಿಸುತ್ತಿದೆ?**

ಇದು ಜೀವನದ ಅತ್ಯಂತ ಮಹತ್ವದ ಹೆಜ್ಜೆ. ಗ್ಲಾಮರ್ ಜಗತ್ತಿನಲ್ಲಿ ನನ್ನನ್ನು ಮುಂಚೂಣಿಗೆ ತಂದಿದೆ ಎನ್ನುವ ಒಂದೇ ಕಾರಣಕ್ಕೆ ಅಲ್ಲ, ಒಬ್ಬ ಮನುಷ್ಯಳಾಗಿ ನನ್ನನ್ನು ನನಗೆ ಹೊಸದಾಗಿ ಪರಿಚಯಿಸಿದೆ ಎನ್ನುವ ಕಾರಣಕ್ಕೆ ಇದು ನನಗೆ ಮುಖ್ಯ. ಈ ಜಗತ್ತಿಗೆ ನನ್ನನ್ನು ಪರಿಚಯಿಸುವ ಜೊತೆಗೆ, ನನಗೂ ಈ ಜಗತ್ತನ್ನು ಪರಿಚಯಿಸಿದ ಈ ವೇದಿಕೆಗೆ ನಾನು ಋಣಿ. ಈ ವೇದಿಕೆಯಲ್ಲಿ ನನ್ನ ಭಾರತವನ್ನು ಪ್ರತಿನಿಧಿಸುವ ಅವಕಾಶ ನನಗೆ ಸಿಕ್ಕಿದ್ದರ ಬಗ್ಗೆ ನನಗೆ ತೃಪ್ತಿ ಇದೆ.

ಈ ವೇದಿಕೆ ಏರಲು ಸಾಕಷ್ಟು ಜನರಿಗೆ ಅರ್ಹತೆ ಇರುತ್ತದೆ, ಆದರೆ ಎಲ್ಲರಿಗೂ ಅವಕಾಶ ಒದಗಿಬಂದಿರುವುದಿಲ್ಲ.ಹೀಗಾಗಿ ಇದು ನನಗೊಬ್ಬಳಿಗೇ ಸೇರಬೇಕಾದ ಕಿರೀಟವಲ್ಲ ಎಂದುಕೊಳ್ಳುವೆ. ಈ ಇಪ್ಪತ್ತು ವರ್ಷಗಳ ಅವಧಿಯಲ್ಲಿ ನಮ್ಮ ನಾಡಿನ ಸಾಕಷ್ಟು ಸುಂದರಿಯರು ರಾಷ್ಟ್ರೀಯ–ಅಂತರರಾಷ್ಟ್ರೀಯ ವೇದಿಕೆಯನ್ನು ತಲುಪಿ ಬಂದಿದ್ದಾರೆ. ಪ್ರತಿವರ್ಷ ಇದೇ ಹುಮ್ಮಸ್ಸು, ಇದೇ ಕನಸು, ಹೆಬ್ಬಯಕೆಯನ್ನು ಹೊತ್ತು ವೇದಿಕೆ ಏರುತ್ತಿದ್ದ ಪ್ರತಿಯೊಬ್ಬ ಸುಂದರಿಯ ಹೆಸರೂ ಈ ಕಿರೀಟದ ಮೇಲಿದೆ. ಅವರಿಗೆ ಸಿಗದ ಭಾಗ್ಯ ನನಗೆ ಸಿಕ್ಕಿದೆ. ನಾನೇ ಶ್ರೇಷ್ಠ ಎನ್ನುವ ಭಾವನೆ ನನ್ನದಲ್ಲ. ಅಥವಾ ಅವರ ಪ್ರಯತ್ನದ ಬಗ್ಗೆ, ಅವರ ಪ್ರತಿಭೆಯ ಬಗ್ಗೆ, ಸೌಂದರ್ಯದ ಬಗ್ಗೆ ನಾವು ಅನುಮಾನ ಪಡಬೇಕಾದ ಅಗತ್ಯವೂ ಇಲ್ಲ. ಪ್ರತಿಯೊಬ್ಬರಿಗೂ ಸಿಗುವ ಅವಕಾಶಗಳು ಬೇರೆಬೇರೆ, ಆಯಾ ಸಂದರ್ಭಗಳೂ ಬೇರೆಯೇ ಆಗಿರುತ್ತವೆ. ಈ ಎಲ್ಲ ಕಾರಣಗಳಿಂದ ಕಿರೀಟ ನನ್ನ ಮುಡಿಗೇರಿದೆ. ಈ ವೇದಿಕೆಗೆ, ಈ ಪರಿಸ್ಥಿತಿಗೆ, ಅವಕಾಶಕ್ಕೆ ನಾ ಋಣಿ.

◆ ಪ್ರತಿಭೆ–ಸಾಮರ್ಥ್ಯಕ್ಕಿಂತ ಪರಿಸ್ಥಿತಿ–ಅವಕಾಶಗಳೇ ಯಶಸ್ಸನ್ನು ನಿರ್ಧರಿಸುತ್ತವೆ ಎನ್ನುತ್ತೀರಾ?

ಇಲ್ಲ, ಪ್ರತಿಭೆ–ಸಾಮರ್ಥ್ಯಗಳೇ ಯಶಸ್ಸಿನ ಮೊದಲ ಮೆಟ್ಟಿಲು. ಈ ಎರಡು ಮಾನದಂಡಗಳು ಇಲ್ಲದೆ ಇಂತಹ ರಾಷ್ಟ್ರೀಯ–ಅಂತರರಾಷ್ಟ್ರೀಯ ಸ್ಪರ್ಧೆಗಳ ವೇದಿಕೆಯನ್ನು ತಲುಪಲು ಸಾಧ್ಯವಿಲ್ಲ. ಆದರೆ ಇಂಥದ್ದೊಂದು ಯಶಸ್ಸು ಒಲಿಯಬೇಕು ಎಂದರೆ ಪ್ರತಿಭೆಗೆ ತಕ್ಕ ಅವಕಾಶಗಳೂ ಸಿಗಬೇಕು, ಪರಿಸ್ಥಿತಿಗಳೂ ಅನುಕೂಲಕರವಾಗಿರಬೇಕು.



◆ ಕೊರೊನಾ ಕಾಲಘಟ್ಟದಲ್ಲಿ ಇಡೀ ದೇಶವೇ ತಲ್ಲಣವನ್ನು ಎದುರಿಸುತ್ತಿದೆ. ಎಲ್ಲೆಲ್ಲೂ ಕಳವಳ. ಇಂತಹ ಸ್ಥಿತಿಯಲ್ಲಿ ನಿಮ್ಮ ಸಂಭ್ರಮವನ್ನು ಹೇಗೆ ವ್ಯಾಖ್ಯಾನಿಸುತ್ತೀರಿ?

ಹೌದು, ಇತಿಹಾಸದಲ್ಲಿ ಎಂದೂ ಕಂಡರಿಯದಂತಹ ತಲ್ಲಣ ಇಂದು ನಮ್ಮನ್ನು ಆವರಿಸಿದೆ. ಇದು ನಮಗೆಲ್ಲಾ ಭಾವನಾತ್ಮಕವಾದ ಸಮಯ. ಇಂತಹ ಸ್ಥಿತಿಯಲ್ಲಿ ಇದನ್ನು ನಾನು ಕೇವಲ ಒಂದು ಸ್ಪರ್ಧೆಯಾಗಿ ತೆಗೆದುಕೊಂಡಿರಲಿಲ್ಲ. ಸಂಕಟದ ಸಮಯದಲ್ಲೂ ನನ್ನ ದೇಶ ಹೆಮ್ಮೆ ಪಡುವಂತಹ, ನನ್ನ ಜನರ ಮುಖದ ಮೇಲೆ ನಗೆ ಅರಳುವಂತಹ ಕೆಲಸವನ್ನು ಮಾಡುವುದು ನನ್ನ ಜವಾಬ್ದಾರಿಯಾಗಿತ್ತು. ಯಾವುದೇ ಸ್ಥಿತಿಯಲ್ಲಿಯೂ ನಾವು ಇತರ ದೇಶಗಳೊಂದಿಗೆ ಭುಜಕ್ಕೆ ಬುಜ ಕೊಟ್ಟು ನಡೆಯಬಲ್ಲೆವು ಎನ್ನುವುದನ್ನು ನಾನು ತೋರಿಸಬೇಕಿತ್ತು.

◆ ಈ ಯಶಸ್ಸು ನಿರೀಕ್ಷಿತವಾಗಿತ್ತೆ?

ನಿಜ ಹೇಳುವೆ, ಇದು ನನ್ನ ಯೋಜನೆಯೇ ಅಲ್ಲ. ನನಗೆ ಡಾನ್ಸ್ ಎಂದರೆ ಬಹಳ ಇಷ್ಟ. ವೃತ್ತಿಪರ ನೃತ್ಯಗಾರ್ತಿಯಾಗಬೇಕೆನ್ನುವ ಆಸೆಯಿತ್ತು. ಆದರೆ ಜೀವನ ನನಗಾಗಿ ಬೇರೆಯದೇ ಯೋಜನೆಗಳನ್ನು ಸಿದ್ಧಪಡಿಸಿತ್ತು. ಆರ್ಥಿಕ ಅಗತ್ಯಗಳಿಗಾಗಿ ಮಾಡೆಲಿಂಗ್‌ನಲ್ಲಿ ಹೆಜ್ಜೆಯೂರಿದೆ. ಮಿಸ್ ಯುನಿವರ್ಸ್‌ನಂತಹ ಸ್ಪರ್ಧೆ ನನ್ನ ಕನಸಿನಲ್ಲೂ ಇರಲಿಲ್ಲ. ಅದರ ಬಗ್ಗೆ ನನ್ನಲ್ಲಿ ಕನಸು ಬಿತ್ತಿದ ನನ್ನ ರೂಮ್‌ಮೇಟ್ ಗೆಳತಿಯನ್ನು ನಾನಿಲ್ಲಿ ಸ್ಮರಿಸಲೇಬೇಕು. ಸ್ಪರ್ಧಿಸಬೇಕು ಎನಿಸಿತು, ಸ್ಪರ್ಧಿಸಿದೆ. ಪೂರ್ಣಪ್ರಮಾಣದ ಪರಿಶ್ರಮ ಹಾಕಿದೆ. ಪ್ರಯತ್ನ ಮಾತ್ರ ನನ್ನದು, ಫಲಿತಾಂಶದ ಬಗ್ಗೆ ನಾನು ಚಿಂತಿಸುವುದಿಲ್ಲ. ಜೀವನದಲ್ಲಿ ನಾವೇನು ಮಾಡಲು ಸಾಧ್ಯ ಎನ್ನುವುದಷ್ಟೇ ನಮ್ಮ ಕೈಯಲ್ಲಿ ಇರುತ್ತದೆ. ಅದರ ಫಲಿತಾಂಶ ನಮ್ಮ ಹಿಡಿತದಲ್ಲಿ ಇರುವುದಿಲ್ಲ. ಆದರೆ ಫಲಿತಾಂಶ ಕೇಳಿ ಹೆಮ್ಮೆ ಉಂಟಾಗಿದ್ದು ಸುಳ್ಳಲ್ಲ. ನನ್ನಂತಹ ಸಾಮಾನ್ಯ ಹುಡುಗಿಯೊಬ್ಬಳು ಪ್ರತಿಷ್ಠಿತ ವೇದಿಕೆಯಲ್ಲಿ ದೇಶವನ್ನು ಪ್ರತಿನಿಧಿಸುವುದು ನಿಜಕ್ಕೂ ಹೆಮ್ಮೆಯ ಸಂಗತಿ.

◆ ನಿಮ್ಮ ಯಾವ ಗುಣ ಸ್ಪರ್ಧೆಯಲ್ಲಿ ಇತರ ಸುಂದರಿಯರಿಗಿಂತ ನಿಮ್ಮನ್ನು ಭಿನ್ನವಾಗಿಸಿತು?

● ಸೌಂದರ್ಯ ಎಂದರೆ ಏನು?

ಸೌಂದರ್ಯ ಎಂದರೆ ಕಣ್ಣಿಗೆ ಕಾಣುವ ಬಣ್ಣ, ಎತ್ತರ, ನೋಟ, ನಿಲುವು, ತೊಡುವ ಗೌನ್... ಇದಷ್ಟೇ ಅಲ್ಲ. ಸೌಂದರ್ಯಕ್ಕೆ ಬಹಳ ವಿಸ್ತಾರವಾದ ಅರ್ಥವಿದೆ. ಸೌಂದರ್ಯದ ವ್ಯಾಖ್ಯಾನವು ಬಹಳ ಆಳವಾಗಿದೆ ಮತ್ತು ಅದು ಬದಲಾವಣೆಗೆ ಒಳಗಾಗುತ್ತ ಬರುತ್ತದೆ. ನನ್ನ ದೃಷ್ಟಿಯಲ್ಲಿ ಸೌಂದರ್ಯ ಎಂದರೆ 'ದಯೆ'. ಮೊದಲನೆಯದಾಗಿ, ನಮ್ಮ ಮೇಲೆ ನಮಗಿರುವ ದಯೆ. ಇನ್ನೊಂದು ಆತ್ಮಬಲ. ಏನೇ ಬಂದರೂ, ಎಲ್ಲೇ ಇದ್ದರೂ ನೀವಾಗಿಯೇ ನೀವಿರುವ ಆತ್ಮಬಲವೇ ಸೌಂದರ್ಯ. ನಿಮ್ಮ ಸಾಮರ್ಥ್ಯದ ಬಗ್ಗೆ ಮಾತ್ರವಲ್ಲ, ನಿಮ್ಮ ಮಿತಿಗಳ ಬಗೆಗೂ ನಿಮಗೆ ಹೆಮ್ಮೆ ಇರಬೇಕು.